**1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು, ದ.ಕ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:499/2023**

| | |
|---|---|
| **1 ನೇ ಆರೋಪಿಯ ಹೆಸರು** | : ಅರುಣ್ ಕುಮಾರ್ |
| **ತಂದೆಯ ಹೆಸರು** | : ಡಿ ಕೊರಗಪ್ಪ ರೈ |
| **ವಯಸ್ಸು** | : 48 ವರ್ಷ |
| **ವಾಸ್ತವ್ಯ** | : 1-59, ಡಿಂಬ್ರಿ ಮನೆ,<br>ಕುರಿಯ ಗ್ರಾಮ, ಪತ್ತೂರು ತಾಲೂಕು. |
| **2 ನೇ ಆರೋಪಿಯ ಹೆಸರು** | : ವಿನಯ ಕುಮಾರ್ ಜಿ |
| **ತಂದೆಯ ಹೆಸರು** | : ಧರ್ಣಪ್ಪ ಗೌಡ |
| **ವಯಸ್ಸು** | : 23 ವರ್ಷ |
| **ವಾಸ್ತವ್ಯ** | : ಗುಂಪಕಲ್ಲು ಮನೆ,<br>ಕಾಣಿಯೂರು ಅಂಚೆ ಮತ್ತು ಗ್ರಾಮ,<br>ಬೆಳ್ತಂಗಡಿ ತಾಲೂಕು. |
| **3 ನೇ ಆರೋಪಿಯ ಹೆಸರು** | : ಪಿ ಎಮ್ ಸುಂದರ |
| **ತಂದೆಯ ಹೆಸರು** | : ಮಾಂಕು ಮುಗೇರ |
| **ವಯಸ್ಸು** | : 40 ವರ್ಷ |
| **ವಾಸ್ತವ್ಯ** | : # 1-7, ಪರ್ಪುಂಜ ಮನೆ, ಒಳಮೊಗ್ರು ಗ್ರಾಮ,<br>ಪುತ್ತೂರು ತಾಲೂಕು. |

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರನ್ವಯ ಆರೋಪಿಯ ವಿಚಾರಣೆ</u>**

ಪ್ರಶ್ನೆ ನಂ.1 ನೀವು ನ್ಯಾಯಾಲಯದ ಮುಂದೆ ವಿಚಾರಣೆಯಾದ ಎಲ್ಲಾ ಸಾಕ್ಷಿದಾರರ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

ಉತ್ತರ :

ಪ್ರಶ್ನೆ ನಂ.2 : ಪ್ರಾಸಾ1 (ಶ್ರೀಮತಿ ಆಶಾ ಶಂಕರ ಭಂಡಾರಿ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ 1 ನೇ ಆರೋಪಿ ನನ್ನ ತಮ್ಮ. ಚಾಸಾ-2 ನನ್ನ ಗಂಡ. ಚಾಸಾ-

3 ನಮ್ಮ ಕೆಲಸದವರು. ದಿ.27-12-22 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಡಿಂಬ್ರಿ ಮನೆ, ಕರಿಯ ಗ್ರಾಮದ ಸರ್ವೆ ನಂ. 152/2 ನನಗೆ ಸೇರಿದ ಜಾಗದಲ್ಲಿ ಯಾರೋ ಕೆಲಸ ಮಾಡುತಿರುವುದು ಕಂಡುಬಂತು. ಆಗ ನಾನು ತೋಟಕ್ಕೆ ಹೋಗಿ ನೋಡಿದಾಗ ನನ್ನ ತೋಟದಲ್ಲಿ 1 ನೇ ಆರೋಪಿ ಮತ್ತು ಅವನ ಕೆಲಸದವರಾದ ವಿನಯ್ ಮತ್ತು ಸುಂದರ ಎನ್ನುವವರು ಬೇಲಿ ಹಾಕಲು ಪ್ರಯತ್ನಿಸುತ್ತಿದ್ದರು. ಅದನ್ನು ನಾನು ಪ್ರಶ್ನೆ ಮಾಡಿದಾಗ 1 ನೇ ಆರೋಪಿ ನನ್ನನ್ನು ಉದ್ದೇಶಿಸಿ ರಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಈ ಜಾಗದಲ್ಲಿ ನಿನಗೆ ಏನು ಹಕ್ಕು ಇದೆ, ನಿನಗೆ ನನ್ನ ಇನ್ನೊಂದು ಮುಖವನ್ನು ತೋರಿಸುತ್ತೇನೆ, ಇಲ್ಲಿಗೆ ಇನ್ನೊಮ್ಮೆ ಬಂದರೆ ನಿನ್ನನ್ನು ಮತ್ತು ನಿನ್ನ ಕುಟುಂಬದವರನ್ನು ಕೊಲ್ಲದೆ ಬಿಡುವುದಿಲ್ಲ ಎಂದು ಜೀವಬೆದರಿಕೆ ಹಾಕುತ್ತಾ ಕಾಲಿನಿಂದ ನನ್ನ ಹೊಟ್ಟೆಗೆ ತುಳಿದು ನೆಲಕ್ಕೆ ದೂಡಿದನು. ನಾನು ಬಿದ್ದ ನಂತರ ನನ್ನ ಬೆನ್ನಿಗೆ, ಬುಜಕ್ಕೆ ಮತ್ತು ಕುತ್ತಿಗೆಗೆ ತುಳಿದು ನಾನು ತೊಟ್ಟಿದ್ದ ನೈಟಿಯನ್ನು ಹಿಡಿದು ಎಳೆದು ಹರಿದು ಮಾನಭಂಗವುಂಟುಮಾಡಿರುತ್ತಾನೆ. ಆಗ ನಾನು ಜೋರಾಗಿ ಚೀರಿದಾಗ ಮನೆಯಲ್ಲಿದ್ದ ನನ್ನ ಗಂಡ ತೋಟದ ಕಡೆ ಓಡಿ ಬರುತ್ತಿರುವುದನ್ನು ನೋಡಿ 1 ನೇ ಆರೋಪಿ ಹಾಗೂ ಅವನ ಕೆಲಸದವರು ಮೂವರು ಸೇರಿ ಮತ್ತೆ ಅವಾಚ್ಯ ಶಬ್ದಗಳಿಂದ ಬೈದು ನನಗೆ ಮತ್ತು ನನ್ನ ಗಂಡನಿಗೆ ಇಲ್ಲಿಗೆ ಬಂದರೆ ಮುಂದೆ ಕೊಲ್ಲದೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ. ನನಗೆ ನನ್ನ ಎದೆಯ ಹತ್ತಿರ 1 ನೆ ಆರೋಪಿ ಹಲ್ಲೆ ಮಾಡಿದ ಕಾರಣ ತರಚಿದ ಗಾಯ ಮತ್ತು ಕುತ್ತಿಗೆಯಲ್ಲಿ ಊತದ ಗಾಯ ಆಗಿತ್ತು. ನನ್ನ ಗಂಡ ಹಾಗೂ ಚಾಸಾ-3 ನನ್ನನ್ನು ಉಪಚರಿಸಿ ಮನೆಗೆ ಕರೆದುಕೊಂಡು ಹೋದರು ಎಂದು ಸಾಕ್ಷ್ಯ ನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.3

ಪ್ರಾಸಾ-1 ರವರು ಮುಂದುವರಿದು ನಂತರ ನನ್ನ ಗಂಡ ನನ್ನನ್ನು ಕಾರಿನಲ್ಲಿ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದಾರೆ. ಅಲ್ಲಿ ನನ್ನನ್ನು ವೈದ್ಯರು ಪರೀಕ್ಷೆ ಮಾಡಿ ಒಳರೋಗಿಯನ್ನಾಗಿ ಸೇರಿಸಿಕೊಂಡು ಚಿಕಿತ್ಸೆ ಕೊಟ್ಟಿದ್ದಾರೆ. ಆಸ್ಪತ್ರೆಯಲ್ಲಿ ಸಂಜೆ 7.30 ರ ಸಮಯದಲ್ಲಿ ಬಂದು ನನ್ನ ಹೇಳಿಕೆ ಪಡೆದಿದ್ದಾರೆ. ದಿ. 29-12-2022 ರಂದು ಮ 1.30 ರ ಸಮಯದಲ್ಲಿ ಸಂಪ್ಯದ ಪೋ ಠಾಣಾಧಿಕಾರಿಯವರು ಕೃತ್ಯ ನಡೆದ ಜಾಗಕ್ಕೆ ಹೋಗಿ ಅಲ್ಲಿ ಮಹಜರು ಮಾಡಿದ್ದು ಆ ಸಮಯದಲ್ಲಿ ನಾನು ನನ್ನ ಹರಿದ ನೈಟಿಯನ್ನು ಕೊಟ್ಟಿರುತ್ತೇನೆ. ಸಾಕ್ಷಿ ಮುಂದುವರಿದು ಹರಿದ ನೈಟಿಯನ್ನು ನಾನು ನಮ್ಮ ಮನೆಯ ಅಂಗಳದಲ್ಲಿ ಕೊಟ್ಟಿದ್ದೇನೆಂದು ನುಡಿಯುತ್ತಾರೆ. ಕೃತ್ಯ ನಡೆದ ಸ್ಥಳದಲ್ಲಿ ಮಹಜರನ್ನು ಮ 1.30 ರಿಂದ 2.30 ರ ವರೆಗೆ ಮಾಡಿದ್ದಾರೆ. ಆ ಸಮಯದಲ್ಲಿ ಅಬಿಷೇಕ್ ಮತ್ತು ತಿಮ್ಮಯ್ಯ ಹಾಜರಿದ್ದರು. ನಿಪಿ-4 ರ ಸಮಯದಲ್ಲಿ ಪೊಲೀಸರು ನನಗೆ ಸೇರಿದ ಹರಿದ ನಸುಕೆಂಪು ಹಾಗೂ ನಸುಕೇಸರಿ ಬಣ್ಣದ ಡಿಸೈನ್ ಇರುವ ನೈಟಿಯನ್ನು ತಮ್ಮ ವಶ ಪಡೆದರು. ನಾನು ಪೊಲೀಸರಿಗೆ ದೂರು ಕೊಟ್ಟ ನಂತರ ನ್ಯಾಯಾಲಯದಲ್ಲಿ ಹಾಜರಾಗಿ ನ್ಯಾಯಾಧೀಶರ ಸಮ್ಮುಖ ಹೇಳಿಕೆ ಕೊಟ್ಟಿದ್ದೇನೆ. ದೂರು ಕೊಟ್ಟ ನಂತರ ಪೊಲೀಸರು ನನ್ನ ಮರುಹೇಳಿಕೆ ಪಡೆದಿದ್ದಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಕೃತ್ಯಕ್ಕೆ ಸಂಬಂಧಿಸಿದಂತೆ ಒಂದು ಸಿಡಿಯನ್ನು ಪೊಲೀಸರಿಗೆ ನೀಡಿದ್ದೇನೆ. ಸಿಡಿಯಲ್ಲಿ ನಾನು ತೋಟಕ್ಕೆ ಹೋಗಿರುವುದು ಮತ್ತು ಅಲ್ಲಿ ನ ಡೆದ ಕೃತ್ಯದ ಬಗ್ಗೆ ದಾಖಲಾಗಿರುತ್ತದೆ. ನಾನು ಪೊಲೀಸರಿಗೆ ನೀಡಿದ್ದ ಸಿಡಿಯನ್ನು ನೋಡಿದರೆ ಗುರುತಿಸಬಲ್ಲೆ. ನಾನು ಸಿಡಿ ಹಾಜರುಪಡಿಸಿದ ಬಗ್ಗೆ ಒಂದು ದಾಖಲೆ ಬರೆದುಕೊಟ್ಟಿರುತ್ತೇನೆ. ಸದರಿ ದಾಖಲೆಯನ್ನು ಹಾಗೂ ಕಲಂ 65 ಬಿ ಭಾರತೀಯ ಸಾಕ್ಷ್ಯ ಅಧಿನಿಯಮದ

ದೃಡಪತ್ರವನ್ನು ಗುರುತಿಸಿದ ಬಗ್ಗೆ ಸಾಕ್ಷ್ಯ ನುಡಿದಿದ್ದು ಇದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.4 ಫ್ರಾಸಾ.2 (ಶ್ರೀ ಹೆಚ್ ಶಂಕರ್ ಭಂಡಾರಿ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಚಾಸಾ1 ನನ್ನ ಹೆಂಡತಿ. 1 ನೇ ಆರೋಪಿ ನನ್ನ ಹೆಂಡತಿಯ ತಮ್ಮ. ಪುತ್ತೂರಿನಲ್ಲಿ ನಾವು ಡಿಂಬ್ರಿ ಮನೆ ಕುರಿಯಾ ಗ್ರಾಮದಲ್ಲಿ ಇರುತ್ತೇವೆ. ಅಲ್ಲಿ ನನ್ನ ಹೆಂಡತಿಗೆ ಆಕೆಯ ತವರು ಮನೆಯಿಂದ ಬಂದಿರುವ ಸ್ವತ್ತು ಇರುತ್ತದೆ. ಅದರ ಸರ್ವೆ ನಂ 152/2 ಆಗಿರುತ್ತದೆ. ದಿ.27.12.2022 ರಂದು ನಮ್ಮ ಮನೆಗೆ ಸೌಮ್ಯ ಎನ್ನುವವರು ತೋಟದ ಕೆಲಸಕ್ಕೆ ಬಂದಿದ್ದರು. ಆಕೆ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ನಾನು ಮನೆಯ ಅಂಗಳದಲ್ಲಿದ್ದೆ. ಸುಮಾರು ಮ.3 ಗಂಟೆ ಸಮಯದಲ್ಲಿ ನನ್ನ ಹೆಂಡತಿ ಮನೆಯ ಹತ್ತಿರ ಇದ್ದ ಅಡಿಕೆ ತೋಟದಲ್ಲಿ ಬೊಬ್ಬೆ ಹೊಡೆಯುವುದು ಕೇಳಿಸಿತು. ಆಗ ನಾನು ಬೊಬ್ಬೆ ಶಬ್ದ ಕೇಳಿಸಿದ ಸ್ಥಳಕ್ಕೆ ಹೋದೆನು. ನಾನು ಅಲ್ಲಿ ಹೋಗಿ ನೋಡಿದಾಗ ಸ್ಥಳದಲ್ಲಿ ಅರುಣ ಕುಮಾರ, ತನ್ನ ಕೆಲಸದವರಾದ ಸುಂದರ, ವಿನಯ ಇದ್ದರು. ಅವರು ನನ್ನ ಹೆಂಡತಿಯನ್ನು ಉದ್ದೇಶಿಸಿ ಬೇರ್ವಸಿ ಮುಂಡೆ ನಿನ್ನನ್ನು ಮತ್ತು ನಿನ್ನ ಗಂಡನನ್ನು ಕೊಲ್ಲದೇ ಬಿಡುವುದಿಲ್ಲ ಎಂದು ಹೇಳಿ ಅಲ್ಲಿಂದ ಹೊರಟು ಹೋದರು. ಸ್ಥಳದಲ್ಲಿ ನನ್ನ ಹೆಂಡತಿ ಬಿದ್ದಿದ್ದರು. ನಾನು ಆಕೆಯ ಹತ್ತಿರ ಹೋಗಿ ವಿಚಾರ ಮಾಡಿದೆನು. ಅಷ್ಟರಲ್ಲಿ ಅಲ್ಲಿಗೆ ನಮ್ಮ ಕೆಲಸದವರಾದ ಸೌಮ್ಯ ಸಹ ಬಂದರು. ನಾನು ಮತ್ತು ಸೌಮ್ಯ ಸೇರಿ ನನ್ನ ಹೆಂಡತಿಯನ್ನು ಉಪಚರಿಸಿ ಮನೆಗೆ ಕರೆದುಕೊಂಡು ಬಂದೆವು. ಮನೆಯಲ್ಲಿ ನಡೆದ ವಿಚಾರ ಏನು ಎಂದು ನನ್ನ ಹೆಂಡತಿಯನ್ನು ಕೇಳಿದೆನು ಎಂದು ಸಾಕ್ಷ್ಯ ನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.5 ಫ್ರಾಸಾ-2 ರವರು ಮುಂದುವರಿದು ನಾನು ತೋಟಕ್ಕೆ ಹೋಗಿದ್ದಾಗ ಅರುಣ ಕುಮಾರ ಹಾಗೂ ಆತನ ಕೆಲಸದವರಾದ ಸುಂದರ ಮತ್ತು ವಿನಯ 3 ಜನ ನಮ್ಮ ತೋಟಕ್ಕೆ ತಂತಿ ಬೇಲಿಯನ್ನು ಹಾಕುತ್ತಿದ್ದರು ಅದನ್ನು ನಾನು ಪ್ರಶ್ನಿಸಿದಾಗ ಅರುಣ ಕುಮಾರ ನನ್ನನ್ನು ಉದ್ದೇಶಿಸಿ ಬೇರ್ವಸಿ ಮುಂಡೆ ಎಂದು ಬೈದು ನಿನಗೆ ನನ್ನ ಇನ್ನೊಂದು ಮುಖವನ್ನು ತೋರಿಸುತ್ತೇನೆ, ನಿನ್ನನ್ನು ಮತ್ತು ನಿನ್ನ ಗಂಡನನ್ನು ಕೊಲ್ಲದೇ ಬಿಡುವುದಿಲ್ಲ ಎಂದು ಹೇಳಿ ಕಾಲಿನಿಂದ ನನ್ನ ಹೆಂಡತಿಯ ಹೊಟ್ಟೆಗೆ ಒದ್ದು ಆಕೆಯನ್ನು ಕೆಳಕ್ಕೆ ಬೀಳಿಸಿ ಆಕೆಯ ಮುಖಕ್ಕೆ, ಬೆನ್ನಿಗೆ ಹಾಗೂ ಕತ್ತಿಗೆ ಕಾಲಿನಿಂದ ಒದ್ದು ಕೈನಿಂದ ಆಕೆ ತೊಟ್ಟಿದ್ದ ನೈಟಿಯನ್ನು ಎಳೆದು ಹರಿದು ಆಕೆಯ ಮಾನಭಂಗ ಮಾಡಿ ಕೈಯಿಂದ ಆಕೆಯ ಮುಖಕ್ಕೆ ಗುದ್ದಿದ ಬಗ್ಗೆ ಹೇಳಿದರು. ನನ್ನ ಹೆಂಡತಿಯ ಎದೆಯಲ್ಲಿ ತರಚಿದಗಾಯ ಆಗಿತ್ತು, ಕತ್ತಿಗೆ ಹಾಗೂ ಬೆನ್ನಿಗೆ ಜೋರಾದ ಗಾಯ ಆಗಿತ್ತು. ನಂತರ ನಾನು ನನ್ನ ಹೆಂಡತಿಯನ್ನು ಪುತ್ತೂರಿನ ಆದರ್ಶ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿದ್ದು ಅಲ್ಲಿ ಆಕೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಾರೆ. ನನ್ನ ಹೆಂಡತಿಗೆ ನೀಡಿದ್ದ ಜಾಗದಲ್ಲಿ ಅರುಣ ಕುಮಾರಗೆ ಹೆಚ್ಚು ಪಾಲು ಬರಬೇಕೆಂದು ಹೇಳಿ ತಕರಾರು ಮಾಡಿ ಆ ಜಾಗಕ್ಕೆ ಅರುಣಕುಮಾರ ಅಕ್ರಮ ಪ್ರವೇಶ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿರುತ್ತಾರೆ. ಪೋಲಿಸರು ಈ ಬಗ್ಗೆ ನನ್ನನ್ನು ವಿಚಾರಣೆ ಮಾಡಿದ್ದಾರೆ. ಘಟನಾ ದಿನ ನನ್ನ ಹೆಂಡತಿ ಧರಿಸಿದ್ದ ನೈಟಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷ್ಯ

ನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ: ಫ್ರಾಸಾ-3 (ಶ್ರೀಮತಿ ಸೌಮ್ಯ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನನಗೆ ಚಾಸಾ1 ಮತ್ತು ಚಾಸಾ2 ರವರ ಪರಿಚಯ ಇರುತ್ತದೆ. ಅವರು ಕೆಲಸಕ್ಕೆ ಕರೆದಾಗಲೆಲ್ಲಾ ನಾನು ಅವರ ಮನೆಗೆ ಹೋಗುತ್ತೇನೆ. ಅವರ ಮನೆ ಕುರಿಯಾ ಗ್ರಾಮದಲ್ಲಿ ಇರುತ್ತದೆ. ದಿ.27.12.2022 ರಂದು ನಾನು ಚಾಸಾ1 ರವರ ಮನೆಗೆ ತೋಟದ ಕೆಲಸಕ್ಕೆ ಹೋಗಿದ್ದೆನು. ನಾನು ಅವರ ತೋಟದಲ್ಲಿ ಆ ದಿನ ಅಡಿಕೆ ಕುಯ್ಯುವ ಕೆಲಸ ಮಾಡುತ್ತಿದ್ದೆ. ಆ ದಿನ ಸುಮಾರು ಮ.3 ಗಂಟೆ ಸಮಯದಲ್ಲಿ ಚಾಸಾ1 ರವರ ತಮ್ಮ ಅರುಣ ಎನ್ನುವವರು ಚಾಸಾ1 ರವರಿಗೆ ಸೇರಿದ ಜಾಗದಲ್ಲಿ ಇಬ್ಬರು ವ್ಯಕ್ತಿಗಳೊಂದಿಗೆ ಸೇರಿಕೊಂಡು ತಂತಿ ಬೇಲಿ ಹಾಕುತ್ತಿದ್ದರು. ಆಗ ಅಲ್ಲಿಗೆ ಚಾಸಾ1 ರವರು ಬಂದು 1 ನೇ ಆರೋಪಿಯನ್ನು ಏಕೆ ಬೇಲಿ ಹಾಕುತ್ತಿದ್ದಿಯಾ ಎಂದು ಕೇಳಿದರು. ಆಗ ಚಾಸಾ1 ರವರಿಗೆ ಅರುಣರವರು ಬೇರ್ವಸಿ ರಂಡೇ ನೀನು ಯಾರು ಕೇಳಲು ನನ್ನ ಇನ್ನೊಂದು ಮುಖವನ್ನು ನೀನು ನೋಡಿಲ್ಲ ಎಂದು ಹೇಳಿದರು. ನಂತರ ಚಾಸಾ1 ರವರನ್ನು ದೂಡಿ ಹಾಕಿ ಆಕೆಯ ಹೊಟ್ಟೆಗೆ, ಬೆನ್ನಿಗೆ, ಕುತ್ತಿಗೆಗೆ ಕಾಲಿನಿಂದ ಒದ್ದು ಮುಖಕ್ಕೆಲ್ಲಾ ಗುದ್ದಿರುತ್ತಾರೆ. ಗಲಾಟೆ ಸಮಯದಲ್ಲಿ ಅರುಣ ರವರು ಚಾಸಾ1 ರವರು ತೊಟ್ಟಿದ್ದ ನೈಟಿಯ ಬಲಗಡೆ ಹರಿದಿರುತ್ತಾರೆ ಎಂದು ಸಾಕ್ಷ್ಯ ನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ ನಂ.7 ಫ್ರಾಸಾ-3 ರವರು ಮುಂದುವರಿದು ಚಾಸಾ1 ರವರು ಕೆಳಗೆ ಬಿದ್ದಿದ್ದರು. ಆ ಸಮಯದಲ್ಲಿ ಚಾಸಾ1 ರವರ ಗಂಡ ಸ್ಥಳಕ್ಕೆ ಬಂದು ಗಲಾಟೆ ಬಗ್ಗೆ ಅರುಣರವರನ್ನು ಕೇಳಿದ್ದು ಅದಕ್ಕೆ ಅರುಣ ಹಾಗೂ ಆತನ ಜೊತೆಗಿದ್ದ ಇಬ್ಬರು ವ್ಯಕ್ತಿಗಳು ಚಾಸಾ1 ಮತ್ತು 2 ರವರನ್ನು ಉದ್ದೇಶಿಸಿ ನಿಮ್ಮನ್ನು ಮತ್ತು ನಿಮ್ಮ ಕುಟುಂಬದವರನ್ನೆಲ್ಲಾ ಸಾಯಿಸಿ ಬಿಡುತ್ತೇವೆ ಬೇರ್ವಸಿ ರಂಡೇ ಎಂದು ಬೈದಿರುತ್ತಾರೆ. ನಂತರ ನಾನು ಮತ್ತು ಚಾಸಾ2 ರವರು ಚಾಸಾ1 ರವರಿಗೆ ಮನೆಗೆ ಕರೆದುಕೊಂಡು ಬಂದು ಉಪಚರಿಸಿದ್ದು ಚಾಸಾ1 ರವರು ಚಾಸಾ2 ರವರು ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು. ನಾವು ಗಮನಿಸಿದಾಗ ಚಾಸಾ1 ರವರ ಎದೆಗೆ ಪರಚಿದ ಗಾಯ, ಕುತ್ತಿಗೆಯಲ್ಲಿ ದಪ್ಪ ಗಾಯ ಆಗಿದ್ದು ಕಂಡುಬಂತು. ಜಾಗದ ತಕರಾರಿನ ಸಂಬಂಧ ಅರುಣಕುಮಾರವರು ಚಾಸಾ1 ರವರ ಮೇಲೆ ಗಲಾಟೆಮಾಡಿದ್ದಾರೆ. ಅರುಣಕುಮಾರವರ ಜೊತೆ ಇದ್ದ ಇಬ್ಬರು ವ್ಯಕ್ತಿಗಳ ಹೆಸರು ಸುಂದರ್ ಮತ್ತು ವಿನಯ್. ಈ ಬಗ್ಗೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದಾರೆ. ಘಟನಾ ದಿನ ನನ್ನ ಹೆಂಡತಿ ಧರಿಸಿದ್ದ ನೈಟಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ **?**

ಉತ್ತರ

ಪ್ರಶ್ನೆ: ಫ್ರಾಸಾ-4 (ಶ್ರೀ ತಿಮ್ಮಯ್ಯ) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಿ.ಪಿ.2 ಮತ್ತು 3 ದಾಖಲೆಗಳಿಗೆ ನಾನು ದಿನಾಂಕ 29-12-2022 ರಂದು ಡಿಂಬ್ರಿಯಲ್ಲಿನ

ಅಶಾ ಭಂಡಾರಿ ರವರಿಗೆ ಸೇರಿದ ತೋಟದ ಬೇಲಿಯ ಒಳಗೆ ಸಹಿ ಮಾಡಿದ್ದೇನೆ. ಹರೀಶ್ ಎನ್ನುವ ಪೊಲೀಸರು ಸ್ಥಳಕ್ಕೆ ಮಹಜರು ಮಾಡುವ ಸಂಬಂಧ ಬಂದಿದ್ದರು. ಆಶಾ ಭಂಡಾರಿ ಮತ್ತು ಅವರ ತಮ್ಮನಿಗೆ ಬೇಲಿಯ ವಿಚಾರಕ್ಕೆ ಹಲ್ಲೆ ಯಾಗಿತ್ತು. ನಿ.ಪಿ.4 ರ ದಾಖಲೆಗೆ ದಿನಾಂಕ 29-12-2022 ರಂದು ಆಶಾ ರವರಿಗೆ ಸೇರಿದ ಅಂಗಳದಲ್ಲಿ ಸಹಿ ಮಾಡಿದ್ದೇನೆ. ಆ ಸಮಯದಲ್ಲಿ ಕೆಂಪು ನೈಟಿಯನ್ನು ಆಶಾ ರವರು ಪೊಲೀಸರಿಗೆ ಕೊಟ್ಟಿದ್ದರು. ನನ್ನ ಸಮಕ್ಷಮ ಕೊಟ್ಟ ನೈಟಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷ್ಯನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ:9 ಪ್ರಾಸಾ-5 (ಶ್ರೀ ಅಭಿಷೇಕ್) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಿ.ಪಿ.2 ಮತ್ತು 3 ದಾಖಲೆಗಳಿಗೆ ನಾನು ದಿನಾಂಕ 29-12-2022 ರಂದು ಪಂಜಳದಲ್ಲಿ ಅಶಾ ಭಂಡಾರಿ ರವರಿಗೆ ಸೇರಿದ ಅಡಿಕೆ ತೋಟದ ಒಳಗೆ ಸಹಿ ಮಾಡಿದ್ದೇನೆ. ಪೊಲೀಸರು ಗಲಾಟೆಯ ವಿಷಯಕ್ಕೆ ಸ್ಥಳಕ್ಕೆ ಬಂದಿದ್ದರು. ಪೊಲೀಸರು ಸ್ಥಳದಲ್ಲಿ ಮಹಜರು ಮಾಡಿದ್ದರು. ನಿ.ಪಿ.4 ರ ದಾಖಲೆಗೆ ದಿನಾಂಕ 29-12-2022 ರಂದು ಆಶಾ ರವರ ಮನೆಯ ಅಂಗಳದಲ್ಲಿ ಸಹಿ ಮಾಡಿದ್ದೇನೆ. ಆ ಸಮಯದಲ್ಲಿ ಕೆಂಪು ನೈಟಿಯನ್ನು ಆಶಾ ರವರು ಪೊಲೀಸರಿಗೆ ಕೊಟ್ಟಿದ್ದರು. ನನ್ನ ಸಮಕ್ಷಮ ಕೊಟ್ಟ ನೈಟಿಯನ್ನು ನೋಡಿದರೆ ಗುರುತಿಸುತ್ತೇನೆ. ಎಂದು ಸಾಕ್ಷ್ಯ ನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ:10 ಪ್ರಾಸಾ-6 (ಶ್ರೀ ಎಂ. ಕೆ. ಪ್ರಸಾದ್) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು 1999 ರಿಂದ ಪ್ರಸ್ತುತವೂ ಸಹ ಆದರ್ಶ ಆಸ್ಪತ್ರೆ ಪುತ್ತೂರಿನಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತೇನೆ. ದಿನಾಂಕ 27-12-2022 ರಂದು ಅಶಾ ಶಂಕರ ಭಂಡಾರಿ ಯವರು ಅರುಣ್ ಕುಮಾರ್ ರೈ ಎನ್ನುವವರು ಹಾಗೂ ಅವರ ಗುಂಪು ಕೈಯಿಂದ ಹೊಡೆದಿದ್ದಾರೆ ಮತ್ತು ಕಾಲಿನಿಂದ ತುಳಿದಿದ್ದಾರೆ ಎನ್ನುವ ಹಲ್ಲೆಯ ಹಿನ್ನಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ಆಕೆಯನ್ನು ನಾನು ಸಾಯಂಕಾಲ 04.45 ರ ಸಮಯಕ್ಕೆ ಪರೀಕ್ಷಿಸಿದ್ದು, ಆಕೆಗೆ ಬಲಭಾಗದ ಕುತ್ತಿಗೆಯಲ್ಲಿ ಊತ ಗಾಯ, ಎದೆಯ ಭಾಗದಲ್ಲೆಲ್ಲಾ ನೋವು ಇದ್ದುದ್ದು ಕಂಡು ಬಂತು. ನಾನು ಅಶಾ ಶಂಕರ ಭಂಡಾರಿಯವರನ್ನು ಪರೀಕ್ಷಿಸಿದ ಸಂಬಂಧ ಗಾಯದ ಪ್ರಮಾಣಪತ್ರವನ್ನು ನೀಡಿರುತ್ತೇನೆ. ನನ್ನ ಅಭಿಪ್ರಾಯದಲ್ಲಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತದೆ. ಒಬ್ಬ ವ್ಯಕ್ತಿಗೆ ಕೈಗಳಿಂದ ಹಲ್ಲೆ ನಡೆಸಿ ಕಾಲಿನಿಂದ ತುಳಿದರೆ ನಿ.ಪಿ.8 ರಲ್ಲಿ ಕಂಡು ಬರುವ ಗಾಯಗಳು ಆಗುವ ಸಾಧ್ಯತೆಗಳು ಇರುತ್ತದೆ ಎಂದು

ಸಾಕ್ಷ್ಯನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ:11 ಫ್ರಾಸಾ-7 (ಶ್ರೀ ಹರೀಶ್ ಜಿ. ಎನ್.) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು 2022 ರಿಂದ ಮೇ 2026 ರ ವರೆಗೆ ಪುತ್ತೂರು ಗ್ರಾಮಾಂತರ ಠಾಣೆಯಲ್ಲಿ ಪೊಲೀಸು ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 27-10-2022 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 03.00 ಗಂಟೆ ಸಮಯದಲ್ಲಿ ಪುತ್ತೂರಿನ ಆದರ್ಶ ಆಸ್ಪತ್ರೆಯಿಂದ ಒಂದು ಸೂಚನಾ ಪತ್ರ ಬಂದಿದ್ದು ಅದನ್ನು ಸ್ವೀಕರಿಸಿ ನಂತರ ನಾನು ಸಂಜೆ 07.00 ಗಂಟೆ ಸಮಯದಲ್ಲಿ ಆದರ್ಶ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಚಾ.ಸಾ.1 ರವರನ್ನು ಭೇಟಿ ಮಾಡಿ ವಿಚಾರಿಸಿ ಅವರ ಹೇಳಿಕೆಯನ್ನು 07.00-07.30 ರ ಸಮಯದಲ್ಲಿ ದಾಖಲಿಸಿಕೊಂಡಿರುತ್ತೇನೆ. ನಂತರ ಸಂಜೆ 07.45 ರ ಸಮಯಕ್ಕೆ ವಾಪಾಸ್ಸು ಠಾಣೆಗೆ ಹಿಂತಿರುಗಿ ಚಾ.ಸಾ.1 ರವರ ಹೇಳಿಕೆಯ ಆಧಾರದ ಮೇಲೆ ಠಾಣಾ ಆ.ಕ್ರ ಸಂ. 113/2022 ರಂತೆ ಪ್ರ.ವ.ವ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ನಮ್ಮ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ನಂತರ ದಿನಾಂಕ 29-12-2022 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ತಿಮ್ಮಯ್ಯ ಮತ್ತು ಅಭಿಷೇಕ್ ರವರ ಸಮಕ್ಷಮ ಚಾ.ಸಾ.1 ರವರು ತೋರಿಸಿದ ಸ್ಥಳದಲ್ಲಿ ಸ್ಥಳಮಹಜರನ್ನು ಮಧ್ಯಾಹ್ನ 03.00-03.30 ಗಂಟೆ ವರೆಗೆ ತಯಾರಿಸಿರುತ್ತೇನೆ. ಸಾಕ್ಷಿ ಮುಂದುವರಿದು 01.30-02.30 ರ ವರೆಗೆ ಮಹಜರು ತಯಾರಿಸಿರುತ್ತೇನೆ ಎಂದು ನುಡಿಯುತ್ತಾರೆ. ಮಹಜರು ಕಾಲದಲ್ಲಿ ನಕ್ಷೆಯನ್ನು ಕೂಡಾ ಸ್ಥಳದಲ್ಲಿ ತಯಾರಿಸಿದ್ದೇನೆ. WPC 2313 ರವರು ನನ್ನ ಮೊಬೈಲ್ ನಿಂದ ಸ್ಥ ಳ ಮಹಜರು ಕಾಲದಲ್ಲಿ ಫೋಟೋವನ್ನು ತೆಗೆದಿದ್ದಾರೆ. ದಿನಾಂಕ 29-12-2022 ರಂದು ಮಧ್ಯಾಹ್ನ 03.00-03.30 ರ ಸಮಯದಲ್ಲಿ ಮನೆಯ ಹೊರಾಂಡದಲ್ಲಿ ಪಂಚರ ಸಮಕ್ಷಮ ಫಿರ್ಯಾದಿ ಘಟನಾ ಸಮಯದಲ್ಲಿ ತೊಟ್ಟಿದ್ದ ಬಟ್ಟೆಯನ್ನು ಹಾಜರುಪಡಿಸಿದ್ದು ಅದನ್ನು ಜಪ್ತುಪಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ವಿವರವಾದ ಸ್ವತ್ತು ಮಹಜರನ್ನು ಕೂಡಾ ತಯಾರಿಸಿರುತ್ತೇನೆ. ಸ್ವಾಧೀನಪಡಿಸಿಕೊಂಡ ಸ್ವತ್ತನ್ನು ಮಾಲುಪಟ್ಟಿಗೆ ಲಗತ್ತಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಫಿರ್ಯಾದಿಯ ಮರುಹೇಳಿಕೆ , ಚಾ.ಸಾ.2 ಮತ್ತು 3 ರವರ ಹೇಳಿಕೆಯನ್ನು ಪೊಲೀಸು ಠಾಣೆಯಲ್ಲಿ ಪಡೆದಿರುತ್ತೇನೆ. ನಂತರ ತಹಶೀಲ್ದಾರ್ ಪುತ್ತೂರು ರವರಿಂದ ಘಟನೆ ನಡೆದ ಸ್ಥಳ ಯಾರಿಗೆ ಸೇರಿದ್ದು ಎನ್ನುವ ಬಗ್ಗೆ ಮಾಹಿತಿ ಕೇಳಿ ಕೋರಿಕೆ ಪತ್ರ ಕೊಟ್ಟು ಸ್ವೀಕೃತಿಯನ್ನು ಪಡೆದಿರುತ್ತೇನೆ. ಅದೇ ದಿನ ವೈದ್ಯಾಧಿಕಾರಿಯವರಿಗೆ ಚಾ.ಸಾ.1 ರವರ ಗಾಯದ ಪ್ರಮಾಣಪತ್ರವನ್ನು ನೀಡುವಂತೆ ಕೋರಿಕೆಪತ್ರವನ್ನು ನೀಡಿರುತ್ತೇನೆ. ನಂತರ ಕಡತವನ್ನು ಚಾ.ಸಾ.11 ರವರಿಗೆ ವಹಿಸಿ ಕೊಟ್ಟಿರುತ್ತೇನೆ. ಚಾ.ಸಾ.1 ರವರಿಂದ ಪಡೆದ ಹೇಳಿಕೆ , ಸ್ಥಳ ಮಹಜರು , ನಕಾಶೆ , ಸ್ವತ್ತು ಸಾಧೀನತಾ ಮಹಜರನ್ನು, ಚಾ.ಸಾ.1 ರವರ ಬಟ್ಟೆಯನ್ನು, ಪ್ರ.ವ.ವರದಿಯನ್ನು ಹಾಗೂ ಆರೋಪಿತರನ್ನು ನೋಡಿ ಗುರುತಿಸಿದ ಬಗ್ಗೆ ಸಾಕ್ಷ್ಯನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

ಉತ್ತರ

ಪ್ರಶ್ನೆ:12 ಫ್ರಾಸಾ-8 (ಶ್ರೀ ಸುಬ್ರಹ್ಮಣ್ಯ ಹೆಚ್) ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಾನು ದಿನಾಂಕ 01-03-2023 ರಿಂದ ದಿನಂ ಾಕ 17-08-2023

ಪುತ್ತೂರು ಗ್ರಾಮಾಂತರ ಠಾಣೆಯಲ್ಲಿ ಪೊಲೀಸು ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 06-04-2023 ರಂದು ಚಾ.ಸಾ.10 ರವರಿಂದ ಪ್ರಕರಣದ ಕಡತವನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರಿಸಿರುತ್ತೇನೆ. ಅದೇ ದಿನ ಚಾ.ಸಾ.1 ರವರ ಗಾಯದ ಪ್ರಮಾಣಪತ್ರವನ್ನು ಚಾ.ಸಾ.6 ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾ.ಸಾ.8 ರವರಿಂದ ತಕ್ಷೀರು ನಡೆದ ಸ್ಥಳದ RTC ಯನ್ನು ಪತ್ರದ ಮೂಲಕ ಪಡೆದಿದ್ದೇನೆ. ಅದೇ ದಿನ ತನಿಖೆ ಪೂರೈಸಿ ಮಾನ್ಯ ನ್ಯಾಯಾಲಯಕ್ಕೆ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ. ಗಾಯದ ಪ್ರಮಾಣಪತ್ರ, ತಹಶೀಲ್ದಾರ್ ರವರು ನೀಡಿದ ಪತ್ರ, RTC ಹಾಗೂ ಚಾ.ಸಾ.8 ರವರು ನೀಡಿದ ಪತ್ರವನ್ನು ನೋಡಿ ಗುರುತಿಸಿದ ಬಗ್ಗೆ ಸಾಕ್ಷ್ಯ ನುಡಿದಿದ್ದು ಅದಕ್ಕೆ ನೀವೇನು ಹೇಳುವಿರಿ ?

**ಉತ್ತರ**

ಪ್ರಶ್ನೆ ನಂ.13 : ಆರೋಪಿಯಾದ **ನೀವು** ಈ ಪ್ರಕರಣದ ಬಗ್ಗೆ ಏನಾದರೂ ಹೇಳುವುದಿದೆಯಾ**?**

ಉತ್ತರ :

ಪ್ರಶ್ನೆ ನಂ.14 : **ನಿಮ್ಮ** ಪರ ಸಾಕ್ಷಿ ವಿಚಾರಣೆ ಮಾಡು **ವಿರಾ ?**

ಉತ್ತರ :

ಮೇಲಿನ ಹೇಳಿಕೆಯನ್ನು ಆರೋಪಿಯ ಹಾಜರಾತಿಯಲ್ಲಿ ಅವನು ನೀಡಿದ ಯಥಾವತ್ತು ಉತ್ತರವನ್ನು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು ಮತ್ತು ಹೇಳಿಕೆಯನ್ನು ಆರೋಪಿಯ ಹೇಳಿಕೆಯ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಯೆಂದು ನಾನು ದೃಢೀಕರಿಸುತ್ತೇನೆ.

**ದಿನಾಂಕ** ಃ 28/07/2026

1 **ನೇ** ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು